ವ್ಯತ್ಯಾಸದ ಹಿಂದಿನ ಕಾರಣವಿದ್ದರೂ ಇರಬಹುದು.

ಕಿರಗೂರಿನಲ್ಲಿ ತಾರುಣ್ಯದಿಂದ ತುಳುಕುವ ಹೆಣ್ಣುಮಕ್ಕಳಷ್ಟೇ ಇಲ್ಲ; ಕೋಳಿಗಳಿಗೆ ನೀಡುವ ಮುದ್ದೆಯ ತುತ್ತಿನಲ್ಲಿ ಹುಡುಗನಿಗೂ ಒಂದು ತುತ್ತು ನೀಡುವ ಸಾಕವ್ವನಂಥ ಹಿರಿಯತಾಯಿ ಇದ್ದಾಳೆ. ಓಡಿಹೋಗಿ ಮರಳಿ ಬಂದ ನಾಗಮ್ಮನ ಬೆನ್ನಿಗೆ ನಿಲ್ಲುವ ಪ್ರಬುದ್ಧ ಹಿರಿಯಳಿದ್ದಾಳೆ. ಹೀಗೆ ಹಲವು ವಯೋಮಾನ, ಮನೋಧರ್ಮದ ಪಾತ್ರಗಳಿಗೆ ಸುಮನ್ ಕಲೆಹಾಕಿರುವ ತಾರಾಮಂಡಳಿ ಕುತೂಹಲಕರವಾಗಿದೆ. ಲಿಪ್‌ಸ್ಟಿಕ್ ಪಸೆ ಆರದ ಹೆಣ್ಣುಮಕ್ಕಳನ್ನು ಸುಮನ್ ಕಿರಗೂರಿಗೆ ಕರೆದುತಂದಿದ್ದಾರೆ. ಪ್ರೇಕ್ಷಕರಿಗೆ ಈಗಾಗಲೇ ಪರಿಚಯವಿರುವ ಗ್ಲಾಮರಸ್ ಮುಖಗಳನ್ನು, ಹಳ್ಳಿಯ ಹೆಣ್ಣುಗಳಾಗಿ ಒಪ್ಪಿಸುವ ಸವಾಲು ಸಣ್ಣದೇನಲ್ಲ. ಆ ಪ್ರಯತ್ನದಲ್ಲಿ ನಿರ್ದೇಶಕಿ ಯಶಸ್ವಿಯಾಗಿದ್ದಾರೆ. ಶ್ವೇತಾ ಶ್ರೀವಾಸ್ತವ, ಸೋನು, ಸುಕೃತಾ ವಾಗ್ಲೆ, ಮಾನಸಾ ಜೋಷಿ, ಕಾರುಣ್ಯಾ ರಾಮ್ – ಇವರ ಜೊತೆಗೆ, ಬಿ. ಜಯಶ್ರೀ, ಗಿರಿಜಾ ಲೋಕೇಶ್, ಲಕ್ಷ್ಮೀ ಚಂದ್ರಶೇಖರ್ ಅವರಂಥ ಹಿರಿಯ ಅಭಿನೇತ್ರಿಯರೂ ಕಿರಗೂರು ಬಳಗದಲ್ಲಿದ್ದಾರೆ. ಇನ್ನೊಂದು ಬದಿಯಲ್ಲಿ ಕಿಶೋರ್, ಅಚ್ಯುತಕುಮಾರ್, ಸಿ. ಬಸವಲಿಂಗಯ್ಯ, ಯೋಗಿ(ಲೂಸ್ ಮಾದ), ಎಸ್. ನಾರಾಯಣ್, ಶರತ್ ಲೋಹಿತಾಶ್ವ, ಪ್ರಕಾಶ್ ಬೆಳವಾಡಿ, ಮಂಡ್ಯ ರಮೇಶ್‌ರಂಥ ಘಟಾನುಘಟಿಗಳಿದ್ದಾರೆ. ಈ ತಾರಾಗಣ ಕೂಡ ಸಿನಿಮಾಕ್ಕೊಂದು ಹಬ್ಬದ ಸಂಭ್ರಮ ತಂದುಕೊಟ್ಟಿದೆ.

ಕಿರಗೂರಿನ ಕಥೆ ವಿಶೇಷ ಅನ್ನಿಸಿದರೂ, ಇದು ನಮ್ಮೂರು ನಿಮ್ಮೂರು ಯಾವುದೂ ಆಗಿರಬಹುದಾದ ಒಂದೂರು. ಇಲ್ಲೂ ಕೇರಿಗಳಿವೆ, ಮಂದಿರಗಳಿವೆ. ಎಲ್ಲ ಊರುಗಳಂತೆ ಇಲ್ಲಿನ ಗಂಡಸರೂ ಹಗಲಿನಲ್ಲಿ ಚೌಕಾಭಾರ ಆಡಿಕೊಂಡು, ಮಬ್ಬಿನಲ್ಲಿ ಸೇಂದಿ ಕುಡಿದುಕೊಂಡು ಸಮಯ ಕಳೆಯುತ್ತಾರೆ. ಹೆಣ್ಣುಮಕ್ಕಳು ಒಗೆತನದೊಂದಿಗೆ ಒಕ್ಕಲುತನವನ್ನೂ ಮಾಡಿಕೊಂಡು ಮನೆಯನ್ನೂ ಊರನ್ನೂ ಪೊರೆಯುತ್ತಾರೆ. ಇದೇ ಊರಿನಲ್ಲಿ ಜನರ ಅಮಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುವ ಪೂಜಾರಿಯೂ ಸೇಂದಿ ಅಂಗಡಿಯ ಉಸ್ತುವಾರಿಯನ್ನು ನೋಡಿಕೊಳ್ಳುವ ಗ್ರಾಮಸೇವಕನೂ ವ್ಯವಸ್ಥೆಯ ಕ್ರೌರ್ಯದ ಪ್ರತಿನಿಧಿಯಾಗಿ ಪೊಲೀಸ್ ಪೇದೆಯೂ ಇದ್ದಾನೆ. ಇಂಥ ಕಿರಗೂರಿನಲ್ಲಿ ಜಾತ್ಯತೀತತೆ ಸೆಲೆಯೊಂದು ಜೀವಂತವಾಗಿರುವುದು ಸಿನಿಮಾದ ಗುಣಾತ್ಮಕ ಸಂಗತಿಗಳಲ್ಲೊಂದು. ಮೊಮ್ಮಗಳ ಉಳುಕನ್ನು ತೆಗೆಸಲೆಂದು ಕಿರಗೂರಿಗೆ ಎತ್ತಿನಗಾಡಿಯಲ್ಲಿ ಬರುವ ಅಜ್ಜಿಯನ್ನು, ದಾರಿಯಲ್ಲಿ ಎದುರಾಗುವ ಗ್ರಾಮಸೇವಕ, 'ಉಳುಕು ತೆಗಿಯೋನು ಕಮ್ಮಿ ಜಾತಿಯೋನು. ನಿಮ್ಮ ಹೆಣ್ಣುಮಗೀನ ಮುಟ್ಟಿಸ್ಕೋತೀರಾ?' ಎನ್ನುತ್ತಾನೆ. ಅದಕ್ಕೆ ಅಜ್ಜಿ ನೀಡುವ ಉತ್ತರ ಪ್ರಬುದ್ಧವಾದುದು: 'ಮಗೀನ ನೋವು ತೆಗೆದುಬಿಟ್ರೆ ಅವನು ಯಾರಾದ್ರೂ ಆಗ್ಲಿ, ಯಾವ ಕುಲದವನಾದ್ರೂ ಆಗ್ಲಿ, ಅವನ ಕಾಲ ಮೇಲೆ ನನ್ನ ತಲೆ ಇಟ್ಟುಬಿಡ್ತೀನಿ'. ಈ ಮನೋಭಾವ ಕಿರಗೂರಿನ ಹೆಣ್ಣುಮಕ್ಕಳಲ್ಲೂ ಇದೆ. ಬೇರೆಬೇರೆ ಕೇರಿಗಳಿಗೆ ಸೇರಿದ ಅವರನ್ನು ಅಕ್ಕತಂಗಿಯರ ವಾತ್ಸಲ್ಯ ಒಟ್ಟುಗೂಡಿಸಿದೆ.

ಹೆಣ್ಣುಮಕ್ಕಳು ಪ್ರಧಾನವಾದ ಈ ಚಿತ್ರಕ್ಕೊಂದು ಪರಿಸರ ಆಯಾಮವೂ ಇರುವುದನ್ನು ಗಮನಿಸಬೇಕು. ಊರಾಚೆಗೆ ಬುಡ ಕಳಚಿಕೊಂಡು ಬಿದ್ದ ಹೆಮ್ಮರವನ್ನು ಕಡಿಯಲು ಬರುವ ಸೋನ್ಸ್(ಯೋಗಿ), ಮರದೊಂದಿಗೆ ಮಾತನಾಡುವುದು, ಮರಕ್ಕೂ ಜೀವವಿದೆ ಎಂದು ಹೇಳುವುದು, ಮರ ತನ್ನ ಮಾತು ಕೇಳಲಿಲ್ಲ ಎಂದು ಮರುಗುವುದು – ಇವೆಲ್ಲ ಪ್ರಕೃತಿಯೊಂದಿಗಿನ ಮನುಷ್ಯ ಸಂಬಂಧದ ಕುರಿತ ಸೂಚನೆಗಳೇ ಆಗಿವೆ. ಚಿತ್ರದಲ್ಲಿ ತುಂಬಿತುಳುಕುವ ಹೆಣ್ಣುಮಕ್ಕಳು